ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸಂಪರ್ಕ ಕಲ್ಪಿಸುವುದು

220(315); ಶ್ರೀ ಸುಧಾಕರ್ ಲಾಲ್ ಪಿ.ಆರ್. (ಕೊರಟಗೆರೆ)

ಅ) ಕೊರಟಗೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಸಂಪರ್ಕವಿಲ್ಲದೇ ವಿದ್ಯಾರ್ಥಿಗಳು, ರೈತರು, ಹಾಗೂ ಅನಾರೋಗ್ಯದಿಂದ ಬಳಲುತ್ತಿರುವವರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಎಷ್ಟು ಮಾರ್ಗಗಳಲ್ಲಿ ನಿಗಮದವತಿಯಿಂದ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ; ಪ್ರಾದೇಶಿಕ ಸಾರಿಗೆ ಪ್ರಾಧಿಕಾರಿಯಿಂದ ಪರವಾನಗಿ ಪಡೆದು ಸೌಲಭ್ಯ ಕಲ್ಪಿಸಿರುವ ಮಾರ್ಗಗಳು ಹಾಗೂ ಅವುಗಳ ವೇಳಾಪಟ್ಟಿಯನ್ನು ನೀಡುವುದು;

ಇ) ನಿಗಮದಿಂದ ನಿಗದಿಪಡಿಸಿದ ಮಾರ್ಗಗಳಲ್ಲಿ ಹಾಗೂ ವೇಳೆಯಲ್ಲಿ ನಿಗಮದ ಬಸ್‌ಗಳು ಸಂಚರಿಸದೇ ಇದ್ದು ಅವುಗಳಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ; ನಿಗಮದ ಬಸ್ಸುಗಳು ನಿಗದಿತ ವೇಳೆಗೆ ಹಾಗೂ ಮಾರ್ಗದಲ್ಲಿ ಸಂಚರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಈ) ಕೊರಟಗೆರೆ ತಾಲ್ಲೂಕಿನಲ್ಲಿ ಬರುವ 252 ಹಳ್ಳಿಗಳಲ್ಲಿ ಕೇವಲ 82 ಹಳ್ಳಿಗಳಿಗೆ ಮಾತ್ರ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದ್ದು, ಬಾಕಿ ಇರುವ ಹಳ್ಳಿಗಳಿಗೆ ಸಾರಿಗೆ ಸೌಲಭ್ಯ ಒದಗಿಸದಿರಲು ಕಾರಣಗಳೇನು; ಹಾಗೂ ಯಾವಾಗ ಸಾರಿಗೆ ಸೌಲಭ್ಯ ಕಲ್ಪಿಸಲಾಗುವುದು;

ಶ್ರೀ ರಾಮಲಿಂಗಾರೆಡ್ಡಿ (ಸಾರಿಗೆ ಸಚಿವರು)

ಅ) ಕೊರಟಗೆರೆ ತಾಲ್ಲೂಕು ರಾಷ್ಟ್ರೀಕೃತವಲ್ಲದ ಮಾರ್ಗದಲ್ಲಿರುತ್ತದೆ. ಆದಾಗ್ಯೂ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಿಂದ 82 ಹಳ್ಳಿಗಳಿಗೆ ಸಾರಿಗೆ ಸೌಲಭ್ಯವನ್ನು ಒದಗಿಸಿಸಲಾಗಿದೆ. ಈ ತಾಲ್ಲೂಕಿನಲ್ಲಿ ಖಾಸಗಿ ಪ್ರವರ್ತಕರುಗಳು ಸಾಕಷ್ಟು ಸಂಖ್ಯೆಯಲ್ಲಿ ಸಾರಿಗೆ ವ್ಯವಸ್ಥೆಯನ್ನು

ತಾಲ್ಲೂಕಿನ ವ್ಯಾಪ್ತಿಯಲ್ಲಿ ಒದಗಿಸಿದ್ದು, ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಪ್ರಯೋಜನ ಪಡೆಯುತ್ತಿದ್ದಾರೆ

ಆ) ಕೊರಟಗೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಟ್ಟು 252 ಹಳ್ಳಿಗಳಿದ್ದು ಅವುಗಳಲ್ಲಿ 82 ಹಳ್ಳಿಗಳಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಸಾರಿಗೆ ವ್ಯವಸ್ಥೆಯನ್ನು ಒದಗಿಸಲಾಗಿದೆ. ಒಟ್ಟು 96 ನಿಗಮದ ವಾಹನಗಳು 257 ಟ್ರಿಪ್‌ಗಳಲ್ಲಿ ಸಂಚರಿಸುತ್ತಿವೆ. ವಾಹನವಾರು ಹಾಗೂ ಟ್ರಿಪ್‌ವಾರು ವೇಳಾಪಟ್ಟಿಯನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ನಿಗಮ ನಿಗಧಿಪಡಿಸಿರುವ ಮಾರ್ಗಗಳಲ್ಲಿ ಆಚರಣೆ ಮಾಡುತ್ತಿರುವ ಎಲ್ಲಾ ಸಾರಿಗೆಗಳನ್ನು ನಿಗದಿತ ವೇಳೆಗೆ ಸರಿಯಾಗಿ ಕಾರ್ಯಚರಣೆ ಮಾಡಲಾಗುತ್ತಿದೆ.

ಈ) ಈ ತಾಲ್ಲೂಕಿನ ಸಾರ್ವಜನಿಕರ ಪ್ರಯಾಣಿಕರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈಗಾಗಲೇ 82 ಹಳ್ಳಿಗಳಿಗೆ ನಿಗಮದ ವತಿಯಿಂದ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ಕೊರಟಗೆರೆ ತಾಲ್ಲೂಕು ಸಂಪೂರ್ಣವಾಗಿ ರಾಷ್ಟ್ರೀಕೃತವಲ್ಲದ ವಲಯದಲ್ಲಿರುತ್ತದೆ. ಇಲ್ಲಿ ಖಾಸಗಿ ಪ್ರವರ್ತಕರು ಸಾಕಷ್ಟು ಸಾರಿಗೆ ಸೌಲಭ್ಯವನ್ನು ತಾಲ್ಲೂಕಿನ ವ್ಯಾಪ್ತಿಯಲ್ಲಿ ಕಾರ್ಯಚರಣೆ ಮಾಡುತ್ತಿದ್ದಾರೆ. ಸದರಿ ಸಾರಿಗೆಗಳ ಅನುಕೂಲವನ್ನು ಸಾರ್ವಜನಿಕ ಪ್ರಯಾಣಿಕರು/ವಿದ್ಯಾರ್ಥಿಗಳು ಪಡೆಯುತ್ತಿದ್ದಾರೆ.

ಅನುಬಂಧ-1

ಕೊರಟಗೆರೆ ತಾಲ್ಲೂಕಿನಲ್ಲಿ ಆಚರಣೆ ಮಾಡುತ್ತಿರುವ ಸಾರಿಗೆಗಳ ವೇಳಾಪಟ್ಟಿ ವಿವರಗಳು.

ಕ್ರ ಸಂ	ಎಲ್ಲಿಂದ – ಎಲ್ಲಿಗೆ	ಒಟ್ಟು ವಾಹನಗಳ ಸಂಖ್ಯೆ	ಒಟ್ಟು ಟ್ರಿಪ್‌ಗಳ ಸಂಖ್ಯೆ	ಕೊರಟಗೆರೆ ಬಸ್ ನಿಲ್ದಾಣ ಬಿಡುವ ವೇಳೆ.
1	ಬೆಂಗಳೂರು – ದಾಬಸ್‌ಪೇಟೆ – ಊರ್ಡಿಗೆರೆ – ಕೊರಟಗೆರೆ – ಮಧುಗಿರಿ – ಪಾವಗಡ	49	112	ಬೆಳಗ್ಗೆ 05.00ರಿಂದ ರಾತ್ರಿ 08.00 ಗಂಟೆಯವರೆಗೆ ಪ್ರತಿ 15 ನಿಮಿಷಕ್ಕೊಂದರಂತೆ
2	ತುಮಕೂರು – ಕೊರಟಗೆರೆ – ಮಧುಗಿರಿ – ಪಾವಗಡ	18	42	5.30, 6.15, 7.00, 8.00, 9.00, 9.45, 10.45, 11.00,12.00, 12.45, 14.00, 14.30, 15.00, 15.30, 16.00, 16.30, 17.00, 17.30, 18.30, 20.00, 20.30, ...
3	ಮಧುಗಿರಿ– ಕೊರಟಗೆರೆ – ತುಮಕೂರು	3	52	7.15, 7.30, 8.00, 8.45, 9.15, 10.00,10.15, 10.30,10.45,11.00,11.30,12.00,12.15, 13.00,13.30,13.45,14.00,14.45,15.00, 15.45,16.30,17.00,17.15,17.30,17.45,17.45
4	ತುಮಕೂರು – ತೋವಿನಕೆರೆ	4	28	ತುಮಕೂರು ಬಸ್ ನಿಲ್ದಾಣ ಬಿಡುವ ವೇಳೆ 6.50, 7.45, 8.30, 10.30, 11.45, 12.45, 13.30, 14.00, 14.45, 16.00, 16.45, 17.15, 17.30, 20.15,
5	ತುಮಕೂರು – ಕೊರಟಗೆರೆ – ಗೌರಿಬಿದನೂರು	10	44	ತುಮಕೂರು ಬಸ್ ನಿಲ್ದಾಣ ಬಿಡುವ ವೇಳೆ 6.00, 6.30, 7.00, 7.30, 9.30, 10.00, 10.30, 11.00, 11.30, 12.00, 12.30, 13.00, 14.00, 14.15, 15.00, 15.30, 16.00, 16.30, 17.00, 17.30, 18.00, 19.00 .
6	ಬೆಂಗಳೂರು – ನೆಲಮಂಗಲ – ತ್ಯಾಮಗೊಂಡ್ಲು – ಕೋಳಾಲ – ಹೊಳವನಹಳ್ಳಿ	1	2	ಬೆಂಗಳೂರು–9.45, 18.00 ಹೊಳವನಹಳ್ಳಿ–5.45, 15.45, 1135 ನೆಲಮಂಗಲ–14.50
7	ದೊಡ್ಡಬಳ್ಳಾಪುರ – ಹೊಸಹಳ್ಳಿ – ಗೊರವನಹಳ್ಳಿ – ಕೊರಟಗೆರೆ	1	4	ಬೆಳಗ್ಗೆ 11.30 ಮತ್ತು ಸಾಯಂಕಾಲ 04.00 ಗಂಟೆಗೆ
8	ತುಮಕೂರು – ತೋವಿನಕೆರೆ – ಏದ್ದರಬೆಟ್ಟ	1	1	ತುಮಕೂರು ಬಸ್ ನಿಲ್ದಾಣ ಬಿಡುವ ವೇಳೆ ರಾತ್ರಿ 08.15
9	ತುಮಕೂರು – ಊರ್ಡಿಗೆರೆ	2	6	ತುಮಕೂರು ಬಸ್ ನಿಲ್ದಾಣ ಬಿಡುವ ವೇಳೆ06.40, 07.15, 08.15, 10.00, 12.00, 1.30 04.00, 05.00, 07.30,
10	ತುಮಕೂರು – ಕೋಳಾಲ – ಯಲಚಗೆರೆ	6	12	ತುಮಕೂರು ಬಸ್ ನಿಲ್ದಾಣ ಬಿಡುವ ವೇಳೆ 06.45, 07.15, 08.15, 01.30, 04.00, 05.00, 07.30,